387 (140) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ):– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಪಟ್ಟಣ ವ್ಯಾಪ್ತಿಯಲ್ಲಿ ಎಷ್ಟು ವಿದ್ಯುತ್ ಕಂಬಗಳು ಕಳಪೆ ಮಟ್ಟದಲ್ಲಿದ್ದು ಬೀಳುವ ಹಂತದಲ್ಲಿರುತ್ತವೆ; (ಪ್ರದೇಶವಾರು ವಿವರ ನೀಡುವುದು);

ಆ) ಬೀಳುವ ಹಂತದಲ್ಲಿರುವ ಕಳಪೆ ಮಟ್ಟದ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಅಧಿಕಾರಗಳು ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಇ) ಇಂಥಹ ಕಂಬಗಳಿಂದ ಆಗುವ ಅನಾಹುತಗಳಿಗೆ ಯಾರು ಹೊಣೆಗಾರರು, ದೂರು ಬಂದ ತಕ್ಷಣ ಕಂಬಗಳನ್ನು ಸ್ಥಳಾಂತರಿಸುವ ಅಧಿಕಾರ ಯಾವ ಅಧಿಕಾರಿಗಳಿಗೆ ಇದೆ;

ಈ) ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರಿಯನ್ನು ಕಡೆಗಣಿಸಿ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹುಬ್ಬಳ್ಳಿ ನಗರ ವ್ಯಾಪ್ತಿಯಲ್ಲಿ ಇದುವರೆಗೂ ಒಟ್ಟು 263 ಶಿಥಿಲಗೊಂಡ ವಿದ್ಯುತ್ ಕಂಬಗಳನ್ನು ಗುರುತಿಸಿ ಬದಲಾಯಿಸಲಾಗಿರುತ್ತದೆ. ಪ್ರದೇಶವಾರು ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ಪ್ರದೇಶಗಳು	ಬದಲಾಯಿಸುವ ಶಿಥಿಲಗೊಂಡ ವಿದ್ಯುತ್ ಕಂಬಗಳ ಸಂಖ್ಯೆ
1	ಹಳೇ ಹುಬ್ಬಳ್ಳಿ	70
2	ಅಯೋಧ್ಯಾ ನಗರ, ನೇಕಾರನಗರ	8
3	ಈಶ್ವರ ನಗರ, ಅಗ್ರಹಾರ, ತಿಮ್ಮಸಾಗರ	4
4	ಮಂಜುನಾಥನಗರ	2
5	ಶಿರೂರ ಪಾರ್ಕ್	2
6	ರಾಮಲಿಂಗೇಶ್ವರ ನಗರ	2

7	ಭೈರಿದೇವರಕೊಪ್ಪ	4
8	ಗೋಕುಲ ರಸ್ತೆಯ ಕೈಗಾರಿಕಾ ವಸಾಹತು	5
9	ಶಿವಪುತ್ತ ಕಾಲೋನಿ	2
10	ಹೊಸೂರು ಕ್ರಾಸ್‌ನಿಂದ ಉಣಕಲ್ ಕ್ರಾಸ್	25
11	ಕೋರ್ಟ್ ಸರ್ಕಲ್‌ನಿಂದ ಕೇಶ್ವಾಪುರ ವೃತ್ತ	12
12	ಅಧ್ಯಾಪಕ ನಗರ	4
13	ಅಕ್ಷಯ ಪಾರ್ಕ್‌ನಿಂದ ಏರ್‌ಪೋರ್ಟ್	66
14	ಹೊಸೂರ್ ಕ್ರಾಸ್‌ನಿಂದ ವಿದ್ಯಾನಗರ	25
15	ಶಕುಂತಲಾ ಆಸ್ಪತ್ರೆಯಿಂದ ಉಣಕಲ್ ಕ್ರಾಸ್	32
	ಒಟ್ಟು	**263**

ಆ) ಗಮನಕ್ಕೆ ಬಂದ ಕೂಡಲೇ ಶಿಥಿಲಗೊಂಡ ಕಂಬಗಳನ್ನು ಬದಲಾಯಿಸಲು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಕ್ರಮ ಕೈಗೊಳ್ಳುತ್ತಿದೆ. ಈ ವಿಷಯದಲ್ಲಿ ವಿಳಂಬ ನೀತಿ ಅನುಸರಿಸುತ್ತಿಲ್ಲ.

ಇ) ಒಂದು ವೇಳೆ ಅನಾಹುತಗಳಾದಲ್ಲಿ ಸಂಬಂಧಪಟ್ಟ ಶಾಖಾಧಿಕಾರಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ದೂರು ಬಂದ ತಕ್ಷಣ ಶಿಥಿಲಗೊಂಡ ಕಂಬಗಳನ್ನು ಬದಲಾಯಿಸಲು ಅಧಿಕಾರಿವು ಸಂಬಂಧಪಟ್ಟ ಶಾಖಾಧಿಕಾರಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಇರುತ್ತದೆ.

ಈ ಮತ್ತು ಉ) ಜವಾಬ್ದಾರಿಯನ್ನು ಕಡೆಗಣಿಸಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.

ಉದ್ಭವಿಸುವುದಿಲ್ಲ.

388 (141) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ):– ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?